ಶಾಲಾ ಮಕ್ಕಳಿಗೆ ಬಿಸಿಯೂಟ

2493(2876); ಶ್ರೀ ಎಂ.ಟಿ.ಬಿ ನಾಗರಾಜ್ (ಹೊಸಕೋಟೆ)

ಅ) ಹೊಸಕೋಟೆ ತಾಲ್ಲೂಕಿನಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟಕ್ಕೆ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಳಪೆ ಆಹಾರ ಪದಾರ್ಥಗಳ ಸರಬರಾಜನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬಂದಿದೆ.

ಆ) ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ತಿರಸ್ಕರಿಸುವಂತೆ ಎಲ್ಲಾ ಶಿಕ್ಷಣಾಧಿಕಾರಿಗಳಿಗೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸುತ್ತೋಲೆ ಮೂಲಕ ತಿಳಿಸಲಾಗಿದೆ. ಹೊಸಕೋಟೆ ತಾಲ್ಲೂಕಿನಲ್ಲಿ ಕೆಎಫ್.ಸಿ.ಎಸ್.ಸಿ. ಗೋದಾಮಿನಿಂದ ಸರಬರಾಜಾದ 11.03 ಕ್ವಿಂಟಾಲ್ ಗೋಧಿ ಕಳಪೆ ಗುಣಮಟ್ಟದಾಗಿದ್ದು, ಈ ಬಗ್ಗೆ ಹೊಸಕೋಟೆ ತಾಲ್ಲೂಕಿನ ಸಹಾಯಕ ನಿರ್ದೇಶಕರು ಕೆಎಫ್.ಸಿ.ಎಸ್.ಸಿ. ರವರಿಗೆ ಪತ್ರ ಬರೆದಿರುತ್ತಾರೆ. ಆಹಾರ ಪದಾರ್ಥಗಳ ತೂಕದಲ್ಲಿ ವ್ಯತ್ಯಾಸವಾಗುತ್ತಿರುವುದನ್ನು ತಡೆಗಟ್ಟಲು ಡಿಜಿಟಲ್ ತೂಕದ ಯಂತ್ರವನ್ನು ಬಳಸುವಂತೆ ತಿಳಿಸಿದ್ದು, ಅದರಂತೆ ಡಿಜಿಟಲ್ ತೂಕ ಯಂತ್ರವನ್ನು ಬಳಸುತ್ತಿದ್ದಾರೆ.